ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್

ಶಿವಶಂಕರಗೌಡ ಹಾಗೂ ಇತರರು -ವಿರುದ್ಧ-ಬಾಗಲಕೋಟೆ ಉದ್ಯೋಗ್ ಅಮಿಟೆಡ್

ಸಿವಿಲ್ ಪುನರೀಕ್ಷಣಾ (ಪುನರಾವಲೋಕನ) ಅರ್ಜಿಸಂಖ್ಯೆ: 1113/2013, ದಿನಾಂಕ 21 ನೇ ಸೆಪ್ಟೆಂಬರ್, 2017

ಆಜ್ಞೆ

ನ್ಯಾಯಮೂರ್ತಿ ಶ್ರೀ ಶ್ರೀನಿವಾಸ್ ಹರೀಶ್ ಕುಮಾರ್:

ಅರ್ಜಿದಾರರು, ಬಾಗಲಕೋಟೆಯ ಪ್ರಧಾನ ಸಿವಿಲ್ ನ್ಯಾಯಾಧೀಶರ ಕಡತದಲ್ಲಿನ ಅಮಲ್ಜಾರಿ ಅರ್ಜಿಸಂಖ್ಯೆ: 53/2007 ರಲ್ಲಿನದಿನಾಂಕ: 20.8.2010 ರಂದು ಹೊರಡಿಸಿದ ಆದೇಶವನ್ನು ಪ್ರಶ್ನಿಸಿ, ಮನರೀಕ್ಷಣಾ ಅರ್ಜಿಯನ್ನು ಸಲ್ಲಿಸುವಲ್ಲಿ ಆದ 1121 ದಿನಗಳ ವಿಳಂಬವನ್ನು ಮನ್ನಿಸಲು ಕೋರಿ ಈ ಅರ್ಜಿಯನ್ನು ಕಾಲಪರಿಮಿತಿ ಅಧಿನಿಯಮದ 5 ನೇ ಪ್ರಕರಣದಡಿಯಲ್ಲಿ ಸಲ್ಲಿಸಿದ್ದಾರೆ.

2. ಈ ಅರ್ಜಿಯೊಂದಿಗೆ ಲಗತ್ತಿಸಿದ ಅಫಿಡಾವಿಟ್ಟು 1ನೇ ಅರ್ಜಿದಾರನು ಮಾಡಿರುವ ಪ್ರಮಾಣವಾಗಿರುತ್ತದೆ.ಇವರು ಈ ಮುಂದಿನ ಕಾರಣಗಳನ್ನು ನೀಡುವ ಮೂಲಕ ಆಗಿರುವ ವಿಳಂಬವನ್ನು ವಿವರಿಸಲು ಪ್ರಯತ್ನಿಸಿರುತ್ತಾನೆ:

i ಪ್ರತ್ಯರ್ಜಿದಾರನು, ಇ.ಪಿ.ಸಂಖ್ಯೆ: 53/2007 ಎಂಬ ಅಮಲ್ಜಾರಿ ವ್ಯವಹರಣೆಯನ್ನುದಿನಾಂಕ: 7.11.2007 ರಂದು ಆರಂಭಿಸಿರುತ್ತಾನೆ.ಇವನು ಹಾಗೂ ಇತರೆ ಅರ್ಜಿದಾರರುಗಳು, ಪ್ರತ್ಯರ್ಜಿದಾರನು/ಡಿಗ್ರಿದಾರಕನಿಗೆ ಸರಿಯಾದ ವಿಳಾಸ ತಿಳಿದಿದ್ದರೂ ಸಹ, ತಪ್ಪಾದ ವಿಳಾಸಕ್ಕೆ ಅವುಗಳನ್ನು ಕಳುಹಿಸಲಾದುದರಿಂದ ತಮಗೆ ಕಳುಹಿಸಿದ ನೋಟೀಸುಗಳನ್ನು ಸ್ವೀಕರಿಸಲಾಗಿರುವುದಿಲ್ಲ.ವ್ಯಾಪಕ ಪ್ರಸಾರವಿರುವಂಥ ಸುದ್ದಿ ಪತ್ರಿಕೆಗಳಾದ " ವಿಜಯ ಕರ್ನಾಟಕ " ಅಥವಾ " ಸಂಯುಕ್ತ ಕರ್ನಾಟಕ " ಅಥವಾ " ಪ್ರಜಾವಾಣಿ " ಯಲ್ಲಿ ನೋಟೀಸನ್ನು ಪ್ರಕಟಿಸುವ ಬದಲು " ವಿದ್ಯಮಾನ " ಅ ಎಂಬ ಸ್ಥಳೀಯ ಸುದ್ದಿ ಪತ್ರಿಕೆಯಲ್ಲಿ ಅವರುಗಳಿಗೆ ಪತ್ರಿಕಾ ಪ್ರಕಟಣೆ ನೀಡುವ ಬದಲಿ ಸೇವೆಯನ್ನು ಕೋರಿದಿನಾಂಕ: 30.5.2009 ರಂದು ಅರ್ಜಿಯನ್ನು ಸಲ್ಲಿಸಿರುತ್ತಾನೆ.ಇದರ ಪರಿಣಾಮವಾಗಿ, ಅವರುಗಳಿಗೆ ಅವರುಗಳಿಗೆ ಅಮಲ್ದಾರಿ ಅಮಲ್ದಾರಿ ಮೊಕದ್ದಮೆ ಇರುವುದು ತಿಳಿಯಲಿಲ್ಲವಾದ್ದರಿಂದ, ಅವರುಗಳು ಅಮಲ್ಜಾರಿ ನ್ಯಾಯಾಲಯದ ಎದುರು ಹಾಜರಾಗಲು ಸಾಧ್ಯವಾಗಿರುವುದಿಲ್ಲ.

11. ಅವರುಗಳು ಈ ನ್ಯಾಯಾಲಯದ ಎದುರು ರಿಟ್ ಅರ್ಜಿಸಂಖ್ಯೆ: 77106/2013 ನ್ನು ಸಲ್ಲಿಸಿದ್ದಾರೆ.ಈ ನ್ಯಾಯಾಲಯವು ಸದರಿ ರಿಟ್ ಅರ್ಜಿಯು ಊರ್ಜಿತವಾಗಿಲ್ಲದಿರುವುದರಿಂದದಿನಾಂಕ: 28.8.2013 ರಂದು ಇದನ್ನು ವಜಾಗೊಳಿಸಿರುತ್ತದೆ.ಅರ್ಜಿದಾರರುಗಳು ಈ ಆದೇಶವನ್ನು ಮಾನ್ಯ ಸರ್ವೋಚ್ಚ ಚ ನ್ಯಾಯಾಲಯದಲ್ಲಿ ಪ್ರಶ್ನಿಸಬೇಕೆಂದು ಬಯಸಿದ್ದರಾದರೂ ಅವರ ನ್ಯಾಯವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆಯ 115 ನೇ ಪ್ರಕರಣದಡಿ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಅಮಲ್ಜಾರಿ ಮೊಕದ್ದಮೆಯಲ್ಲಿದಿನಾಂಕ: 4.8.2010 ಮತ್ತು 20.08.2010 ರಂದು ಹೊರಡಿಸಿದ ಎರಡೂ ಆದೇಶಗಳನ್ನು ಪ್ರಶ್ನಿಸುವುದು ಯುಕ್ತವಾದುದೆಂಬ ಸಲಹೆಯನ್ನು ನೀಡಿರುತ್ತಾರೆ.

3. ಪ್ರತ್ಯರ್ಜಿದಾರರುಗಳು, ಅರ್ಜಿದಾರರುಗಳಿಗೆ ಅಮಲ್ಜಾರಿ ನ್ಯಾಯಾಲಯದಲ್ಲಿನ ವ್ಯವಹರಣೆಗಳ ಸಂಪೂರ್ಣ ಮಾಹಿತಿಯಿತ್ತೆಂದು ಪ್ರಮುಖವಾಗಿ ವಾದಿಸುತ್ತಾ ಆಕ್ಷೇಪಣಾ ವಿವರಪಟ್ಟಿಯನ್ನು ಸಲ್ಲಿಸಿರುತ್ತಾರೆ.ಪ್ರಪ್ರಥಮವಾಗಿ ಅಮಲ್ಜಾರಿ ನ್ಯಾಯಾಲಯವು ಅರ್ಜಿದಾರರುಗಳಿಗೆ ನೋಟೀಸನ್ನು ಆದೇಶಿಸಿರುವುದಾಗಿರುತ್ತದೆ.ಅರ್ಜಿದಾರರುಗಳಿಗೆ ಸಾಮಾನ್ಯ ಪ್ರಕ್ರಿಯೆಯ ಮೂಲಕ ನೋಟೀಸನ್ನು ಜಾರಿಗೊಳಿಸಿವುದು ಸಾಧ್ಯವಾಗಿಲ್ಲವಾದ್ದರಿಂದ ಪ್ರತ್ಯರ್ಜಿದಾರ| ಡಿಗ್ರಿದಾರಕನು ಬದಲಿ ಸೇವೆಯ ಮೂಲಕ ನೋಟೀಸನ್ನು ತಲುಪಿಸಲು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾನೆ.ಅರ್ಜಿದಾರರು ವಾಸವಾಗಿರುವ ಪ್ರದೇಶದಲ್ಲಿ 'ವಿದ್ಯಮಾನ' ಎಂಬ ಸುದ್ದಿ ಪತ್ರಿಕೆಯು ವ್ಯಾಪಕ ಪ್ರಸಾರವನ್ನು ಹೊಂದಿರುತ್ತದೆ.ಸುದ್ದಿಪತ್ರಿಕೆಯಲ್ಲಿ ನೋಟೀಸ್

ಪ್ರಕಟವಾದ ತರುವಾಯವೂ ಸಹ ಅರ್ಜಿದಾರರು ಹಾಜರಾಗದಿರುವಾಗ, ನ್ಯಾಯಾಲಯ ಆಯುಕ್ತರನ್ನು ನೇಮಿಸಿಕೊಂಡು ನ್ಯಾಯಾಲಯದ ಪ್ರಕ್ರಿಯೆಯ ಮೂಲಕ ಬರೆಯಿಸಿಕೊಂಡ ಹಾಗೂ ನೋಂದಾಯಿಸಿಕೊಂಡ ಗುತ್ತಿಗೆ ಪತ್ರವನ್ನು ಪಡೆಯಲು ಅಮಲ್ದಾರಿ ನ್ಯಾಯಾಲಯವು ಮುಂದುವರೆದಿರುತ್ತದೆ ಅಂತಿಮವಾಗಿದಿನಾಂಕ: 20.08.2010 ರಂದು ಅಮಲ್ದಾರಿ ಅರ್ಜಿಯನ್ನು ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡ ತರುವಾಯ ಮುಕ್ತಾಯಗೊಳಿಸಲಾಗಿರುತ್ತದೆ.ಮುಂದುವರೆದು,ದಿನಾಂಕ: 4.08.2010 ರಂದು ಅಮಲ್ದಾರಿ ನ್ಯಾಯಾಲಯವು ಹೊರಡಿಸಿದ ಆದೇಶಕ್ಕೆ ಸಂಬಂಧಿಸಿದಂತೆ ಅರ್ಜಿದಾರರುಗಳು ರಿಟ್ ಅರ್ಜಿಸಂಖ್ಯೆ: 77106/2013 ನ್ನು ಸಲ್ಲಿಸಿರುತ್ತಾರೆಂದೂ ವಾದಿಸಲಾಗಿರುತ್ತದೆ.ಆ ರಿಟ್ ಅರ್ಜಿಯನ್ನುದಿನಾಂಕ: 20.08.2010 ರಂದಿನ ಆದೇಶಕ್ಕೆ ಸಂಬಂಧಿಸಿದಂತೆ ಸಲ್ಲಿಸಿರುವುದಿಲ್ಲ.ದಿನಾಂಕ: 4.08.2010ಂದು ಅಮಲ್ಧಾರಿ ನ್ಯಾಯಾಲಯವು ಆಯುಕ್ತರಿಗೆ ಗುತ್ತಿಗೆ ಪತ್ರವನ್ನು ನೊಂದಾಯಿಸಲು ನಿರ್ದೇಶಿಸಿತು. ದಿನಾಂಕ:20.08.2010 ರಂದು ಅಮಲ್ದಾರಿ ನ್ಯಾಯಾಲಯವು ಅಮಲ್ದಾರಿ ಅರ್ಜಿಯನ್ನು ಸಂಪೂರ್ಣವಾಗಿ ಮನವರಿಕೆ ಮಾಡಿಕೊಂಡು ಮುಕ್ತಾಯಗೊಳಿಸಿರುತ್ತದೆ.ಆದ್ದರಿಂದ, ಆ ಎರಡು ಆದೇಶಗಳೂ ಭಿನ್ನವಾಗಿವೆ.ಅರ್ಜಿದಾರರು,ದಿನಾಂಕ: 04.08.2010 ರಂದು ಹೊರಡಿಸಿದ ಆದೇಶಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ರಿಟ್ ಅರ್ಜಿಯ ಲಾಭವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.ಅಲ್ಲದೆ ವಾಸ್ತವವಾಗಿ ಅಮಲ್ಧಾರಿ ವ್ಯವಹರಣೆಗಳು ತಮ್ಮ ತಿಳುವಳಿಕೆಗೆ ಬಂದಂಥ ದಿನಾಂಕವನ್ನು ಬಹಿರಂಗಪಡಿಸಿಲ್ಲವೆಂದು ಆಕ್ಷೇಪಣಾ ಹೇಳಿಕೆಯಲ್ಲಿ ಹೇಳಿರುತ್ತಾರೆ.ಇಂತಹ ಸನ್ನಿವೇಶಗಳಲ್ಲಿ ವಿಳಂಬವನ್ನು ಮನ್ನಿಸುವುದಕ್ಕೆ ಸಂಬಂಧಿಸಿದಂತೆ ಯುಕ್ತ ಹಾಗೂ ಪರ್ಯಾಪ್ತ ಕಾರಣಗಳನ್ನು ಅಪಿಡಾವಿಟ್ ಬಹಿರಂಗ ಪಡಿಸಿರುವುದಿಲ್ಲ.ಪ್ರಸ್ತುತ ಅಮಲ್ದಾರಿ ಅರ್ಜಿಯನ್ನು ಮುಕ್ತಾಯಗೊಳಿಸಿದ್ದು, ಪುನರೀಕ್ಷಣಾ ಅರ್ಜಿಯನ್ನು ಪುರಸ್ಕರಿಸಲಾಗುವುದಿಲ್ಲ.ಆದ್ದರಿಂದ, ವಿಳಂಬವನ್ನು ಮನ್ನಿಸುವುದಕ್ಕೆ ಸಂಬಂಧಿಸಿದ ಅರ್ಜಿಯು ಊರ್ಜಿತವಾಗಿರುವುದಿಲ್ಲ.

4. ಅರ್ಜಿದಾರರ ಪರ ನ್ಯಾಯವಾದಿಗಳು, ಅರ್ಜಿದಾರರುಗಳಿಗೆ ನೋಟೀಸನ್ನು ಯುಕ್ತವಾಗಿ ಜಾರಿಗೊಳಿಸದಿರುವುದರಿಂದ, ಅವರುಗಳಿಗೆ ತಮ್ಮ ವಿರುದ್ಧವಾಗಿ ಸಲ್ಲಿಸಿರುವ ಅಮಲ್ಧಾರಿ ಅರ್ಜಿಯ ಬಗ್ಗೆ ತಿಳಿದಿರಲಿಲ್ಲವೆಂದು ವಾದಿಸಿರುತ್ತಾರೆ.ಅಲ್ಲದೆ, ಆತ ದಾವೆಯು, ಗುತ್ತಿಗೆ ಕರಾರಿಗೆ ಸಂಬಂಧಿಸಿದಂತೆ ದಾವೆಯು ಒಂದು ನಿರ್ದಿಷ್ಟ ಪಾಲನೆಯಾಗಿದೆ ಎಂದೂ ಸಹ ವಾದಿಸಿರುತ್ತಾನೆ.ಪ್ರತ್ಯರ್ಜಿದಾರರು ಅಮಲ್ದಾರಿ ನ್ಯಾಯಾಲಯಕ್ಕೆ ಗುತ್ತಿಗೆ ಪತ್ರದ ಕರಡನ್ನು ಸಲ್ಲಿಸಿದಾಗ, ಸಿವಿಲ್ ಪಕ್ರಿಯಾ ಸಂಹಿತೆಯ 34 ನೇ ನಿಯಮದ XXI ನೇ ಕ್ರಮಾದೇಶದಡಿ ಅಗತ್ಯಪಡಿಸಿದಂತೆ ಗುತ್ತಿಗೆ ಪತ್ರದ ಕರಡು ಪ್ರತಿಯೊಂದಿಗೆ ನೋಟೀಸನ್ನು ಅರ್ಜಿದಾರರಿಗೆ ಮತ್ತೊಮ್ಮೆ ನೀಡಬೇಕೆಂದು ಅಗತ್ಯಪಡಿಸಿರುತ್ತದೆ.ಇದೊಂದು ಆಜ್ಞಾಪಕ ಉಪಬಂಧವಾಗಿರುತ್ತದೆ.ಅರ್ಜಿದಾರರುಗಳಿಗೆ ನೋಟೀಸನ್ನು ತಲುಪಿಸುವಲ್ಲಿ ಅಮಲ್ಧಾರಿ ನ್ಯಾಯಾಲಯದಿಂದಾದ ವಿಫಲತೆಯ ಪರಿಣಾಮವಾಗಿ ಗುತ್ತಿಗೆ ಪತ್ರವನ್ನು ಬರೆದು, ನೋಂದಾಯಿಸ ಲಾಗಿರುತ್ತದೆ.ಗುತ್ತಿಗೆ ಪತ್ರದಲ್ಲಿ 10 ನೇ ಖಂಡವನ್ನು ಸೇರಿಸಿರುವುದರಿಂದ ಅರ್ಜಿದಾರರ ಹಿತಾಸಕ್ತಿಯು ಗಂಭೀರವಾಗಿ ಬಾಧಕವಾಗಿರುತ್ತದೆ.ವಿಷಯದ ಈ ಹಿನ್ನೆಲೆಯಲ್ಲಿ, ಅರ್ಜಿದಾರರುದಿನಾಂಕ: 20.08.2010 ರ ಆದೇಶವನ್ನು ಪ್ರಶ್ನಿಸಿ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸುವ ಹಕ್ಕನ್ನು ಹೊಂದಿರುತ್ತಾರೆ.ವಾಸ್ತವಿಕವಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 34 ನೇ ನಿಯಮದ XXI ನೇ ಕ್ರಮಾದೇಶದ ಉಲ್ಲಂಘನೆಯಲ್ಲಿ ಬರೆದುಕೊಟ್ಟ ಮತ್ತು ನೊಂದಾಯಿಸಿದ ಯಾವುದೇ ದಸ್ತಾವೇಜು ಕಾನೂನಿನಲ್ಲಿ ಆರಂಭದಿಂದಲೇ ಶೂನ್ಯವಾಗಿರುತ್ತದೆ.ಆದ್ದರಿಂದ ಅಂತಹ ಆದೇಶವನ್ನು ಯಾವುದೇ ಸಮಯದಲ್ಲಾದರೂ ಪ್ರಶ್ನಿಸಬಹುದಾಗಿದ್ದು, ಈ ಸಂಬಂಧದಲ್ಲಿ ಕಾಲ ಮಿತಿಯು ಉದ್ಭವಿಸುವುದೇ ಇಲ್ಲ. ತನ್ನ ವಾದಗಳಿಗೆ ಪೂರಕವಾಗಿ, ಆತ, ಪ್ರತಿಭಾ ಸಿಂಗ್ ಮತ್ತು ಇನ್ನೊಬ್ಬರು –ವಿರುದ್ಧ ಶಾಂತಿ ದೇವಿ ಪ್ರಸಾದ್ ಮತ್ತು ಇನ್ನೊಬ್ಬರು - (2003) ರ ಸರ್ವೋಚ್ಚ ನ್ಯಾಯಾಲಯದ ಮೊಕದ್ದಮೆಗಳು 330, ಹಾಗೂ ಶಿವಶಂಕರ್ ಗುರ್ಗಾರ್ –ವಿರುದ್ಧ ದಿಲೀಪ್ - (2014) 2 ಸರ್ವೋಚ್ಚ ನ್ಯಾಯಾಲಯಗಳ ಮೊಕದ್ದಮೆಗಳು 465, ಮೊಕದ್ದಮೆಗಳಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪುಗಳನ್ನು ಉದಾಹರಿಸಿರುತ್ತಾರೆ.ಕಾಲ ಪರಿಮಿತಿ ಅಧಿನಿಯಮದ 5 ನೇ ಪ್ರಕರಣದಡಿಯಲ್ಲಿ ಅರ್ಜಿಯನ್ನು ಬಹಳ ಎಚ್ಚರಿಕೆಯಿಂದ ಸಲ್ಲಿಸಲಾಗಿದೆ ಎಂಬುದು ಆತನ ವಾದವಾಗಿರುತ್ತದೆ.ಅಲ್ಲದೆ ಅರ್ಜಿದಾರರು ಈ ನ್ಯಾಯಾಲಯದ ಎದುರು ರಿಟ್ ಅರ್ಜಿಸಂಖ್ಯೆ: 77106/2013 ಪ್ರಾಸಿಕ್ಯೂಷನ್ನಲ್ಲಿದ್ದು, ಅರ್ಜಿಯು ಬಾಕಿ ಉಳಿದುಕೊಂಡಿರುವುದು ಸಹ ಅವಧಿ ಮೀರಿದ ತರುವಾಯ ಈ ಪುನರೀಕ್ಷಣಾ ಅರ್ಜಿಯನ್ನು ದಾಖಲಿಸಿರುವುದಕ್ಕೆ ಮತ್ತೊಂದು ಕಾರಣವಾಗಿದೆಯೆಂದೂ ಸಹ

ನಿವೇದಿಸಿಕೊಂಡಿರುತ್ತಾನೆ.ಆದ್ದರಿಂದ, ಕಾಲಪರಿಮಿತಿ ಅಧಿನಿಯಮದ 5 ನೇ ಪ್ರಕರಣದಡಿ ಅರ್ಜಿಯನ್ನು ಪುರಸ್ಕರಿಸಬೇಕೆಂದೂ ನಿವೇದಿಸಿಕೊಂಡಿರುತ್ತಾನೆ.

5. ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಅರ್ಜಿದಾರರು ವಿಳಂಬವನ್ನು ಮನ್ನಿಸಲು ಕೋರಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಈ ನ್ಯಾಯಾಲಯದ ಮುಂದೆ ಸತ್ಯವನ್ನು ಹೇಳಿಲ್ಲವೆಂದು ವಾದಿಸಿರುತ್ತಾನೆ.ರಿಟ್ ಅರ್ಜಿಸಂಖ್ಯೆ: 77106/2013 ಪುನರೀಕ್ಷಣಾ ಅರ್ಜಿಯಲ್ಲಿನ ಪ್ರಶ್ನಿತ ಆದೇಶಕ್ಕೆ ಸಂಬಂಧಿಸಿರುವುದಿಲ್ಲ.ಸದರಿ ರಿಟ್‌ಅನ್ನು ಇದೇ ಅಮಲ್ಜಾರಿ ಮೊಕದ್ದಮೆಯಲ್ಲಿನದಿನಾಂಕ: 4.8.2010 ರ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದು ಅದು ವಜಾಗೊಂಡಿರುತ್ತದೆ.ರಿಟ್ ಅರ್ಜಿಯು ಮತ್ತೊಂದು ಆದೇಶಕ್ಕೆ ಸಂಬಂಧಿಸಿರುವುದರಿಂದ ಕಾಲ ಪರಿಮಿತಿ ಅಧಿನಿಯಮದ 14 ನೇ ಪ್ರಕರಣಕ್ಕೆ ಅನುಸಾರವಾಗಿ ವಿನಾಯಿತಿಯನ್ನು ಕ್ಲೇಮು ಮಾಡುವ ಮೊಕದ್ದಮೆಯನ್ನು ಪತ್ತೆ ಹಚ್ಚಲು ಅರ್ಜಿದಾರರು ಪ್ರಯತ್ನವನ್ನು ಮಾಡಿರುತ್ತಾನೆಂದು ಕಂಡುಬಂದರೂ, ಸದರಿ ಪ್ರಕರಣವು ಅನ್ವಯವಾಗುವುದಿಲ್ಲವಾದ್ದರಿಂದ ಈ ಆಧಾರವನ್ನು ಒಪ್ಪಿಕೊಳ್ಳಲಾಗುವುದಿಲ್ಲ.

6. ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ವಾದಿಸಿರುವ ಎರಡನೇ ಅಂಶವು ಅರ್ಜಿದಾರರುಗಳು ಯುಕ್ತ ಕಾರಣಗಳನ್ನು ನೀಡಿ ವಿಳಂಬವನ್ನು ವಿವರಿಸಿಲ್ಲವೆಂಬುದಾಗಿರುತ್ತದೆ.ಈ ನ್ಯಾಯಾಲಯದಲ್ಲಿ ಅಪೀಲು ಇತ್ಯರ್ಥದಲ್ಲಿರುವ ಸಮಯದಲ್ಲಿ ದಾವಾ ಸ್ವತ್ತಿನ ಖರೀದಿದಾರರು ಅರ್ಜಿದಾರರೇ ಆಗಿದ್ದ ಕಾರಣದಿಂದ ಅಮಲ್ಜಾರಿ ಮೊಕದ್ದಮೆಯಲ್ಲಿ ತಮಗೆ ನೋಟೀಸನ್ನು ಜಾರಿ ಮಾಡಿಲ್ಲವೆಂದು ಅರ್ಜಿದಾರರು ನೀಡಿರುವ ಕಾರಣವನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲ.ಹಾಗಾಗಿ ಎರಡನೇ ಅಪೀಲನ್ನು ಸಹ ವಜಾಮಾಡಲಾಗಿರುತ್ತದೆ.ಅವರುಗಳಿಗೆ ವ್ಯವಹರಣೆಗಳ ಬಗ್ಗೆ ಅರಿವಿತ್ತು.ಅಫಿಡಾವಿಟ್ಟಿನಲ್ಲಿ ಅವರುಗಳು ತಮಗೆ ಯಾವ ದಿನಾಂಕದಂದು ವಾಸ್ತವಿಕವಾಗಿ ಅಮಲ್ಜಾರಿ ವ್ಯವಹರಣೆಗಳ ಬಗ್ಗೆ ತಿಳಿಯಿತೆ ೦ ಬುದನ್ನು ತಿಳಿಸಿಲ್ಲದಿರುವುದು ಅವರುಗಳಿಗೆ ಅಮಲ್ಜಾರಿ ವ್ಯವಹರಣೆಗಳ ಬಗ್ಗೆ ತಿಳಿದಿತ್ತೆಂಬ ೧ ಸತ್ಯಾಂಶವನ್ನು ನಿರೂಪಿಸುತ್ತದೆ ಹಾಗೂ ಡಿಕ್ರಿಯ ಬಗ್ಗೆ ಮನವರಿಕೆಯಾದ ತರುವಾಯ ಅವರು ತಡವಾಗಿ ಈ ಕ್ಷುಲ್ಲಕ ಪುನರೀಕ್ಷಣಾ ಅರ್ಜಿಯೊಂದಿಗೆ ಈ ನ್ಯಾಯಾಲಯದ ಕದ ತಟ್ಟಿರುತ್ತಾರೆ.ಸಮರ್ಥ ಆಧಾರಗಳಿಲ್ಲದಿರುವಾಗ, ಈ ನ್ಯಾಯಾಲಯವು ವಿಳಂಬವನ್ನು ಮನ್ನಿಸಲು ಸಾಧ್ಯವಾಗುವುದಿಲ್ಲ.ತನ್ನ ವಾದಕ್ಕೆ ಪೂರಕವಾಗಿ, ಈತ ಸದಾಶಿವ ಪಾಟೀಲ್ ಇವರ ಮಗ ಶ್ರೀ ಮೋಹನ್ ಮತ್ತು ಇತರರು -ವಿರುದ್ಧ-ಬಾಗಲಕೋಟೆ ಉದ್ಯೋಗ ಅ. ಪ್ರಕರಣದಲ್ಲಿ ಈ ನ್ಯಾಯಾಲಯವು ನೀಡಿರುವ ತೀರ್ಪನ್ನು ಉಲ್ಲೇಖಿಸಿರುತ್ತಾನೆ.

7. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿದಾಗ, ಪರಿಶೀಲಿಸಲೇಬೇಕಾದ ಮೊದಲನೇ ಅಂಶವೆಂದರೆ ಅರ್ಜಿದಾರರುಗಳಿಗೆ ನಿಜವಾಗಿಯು ಅಮಲ್ಜಾರಿ ವ್ಯವಹರಣೆಗಳ ಬಗ್ಗೆ ತಿಳಿದಿರಲಿಲ್ಲವೇ?ಎಂಬುದಾಗಿರುತ್ತದೆ.ಈ ನ್ಯಾಯಾಲಯದ ಎದುರು ಎರಡನೇ ಅಪೀಲು ಇತ್ಯರ್ಥದಲ್ಲಿರುವ ಸಂದರ್ಭದಲ್ಲಿ, ಈ ಹಿಂದಿನ ಭೂ ಮಾಲೀಕರಿಂದ ದಾವಾ ಸ್ವತ್ತನ್ನು ಖರೀದಿಸಿದ್ದೇವೆಂದು ಪುನರೀಕ್ಷಣಾ ಅರ್ಜಿಯ ವಿವರಣಾ ಪತ್ರದ ಖಂಡಿಕೆ 11 ರಲ್ಲಿ ಅರ್ಜಿದಾರರೇ ಸ್ವತಃ ಹೇಳಿರುತ್ತಾರೆ.(ಸ್ಥಾನವನ್ನು ತೆಗೆದುಕೊಂಡಿದ್ದಾರೆ ಆದ್ದರಿಂದ ಈ ಅರ್ಜಿದಾರರುಗಳು ಹಿತಾಸಕ್ತಿಯ ಪ್ರಾಪ್ತಿಯ ಬಲದಿಂದ ಈ ದಾವೆಯಲ್ಲಿ ಪ್ರತಿವಾದಿಗಳಾಗಿರುವ ಮಾರಾಟಗಾರರ ಸ್ಥಾನವನ್ನು ತೆಗೆದುಕೊಂಡಿದ್ದಾರೆ. ಮೊದಲನೇ ನಿದರ್ಶನದಲ್ಲಿ ಅರ್ಜಿದಾರರುಗಳಿಗೆ ಹೊರಡಿಸಿದ ನೋಟೀಸನ್ನು ಅವರಿಗೆ ತಲುಪಿಸಲಾಗಿಲ್ಲವೆಂಬುದು ಹಾಗೂ ತದನಂತರ ಸ್ಥಳೀಯ ದಿನಪತ್ರಿಕೆ ' ವಿದ್ಯಮಾನ'ದಲ್ಲಿ ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆಂಬುದು ಸತ್ಯವಾದ ವಿಚಾರವಾಗಿರುತ್ತದೆ.ನೋಟೀಸನ್ನು ಪ್ರಕಟಿಸಿದ ನಂತರ, ಅಮಲ್ಜಾರಿ ನ್ಯಾಯಾಲಯವು ಅರ್ಜಿದಾರರುಗಳಿಗೆ ನೀಡಿರುವ ಸೇವೆಯು ಯುಕ್ತವಾಗಿದೆಯೆಂದು ಅಭಿಪ್ರಾಯಪಟ್ಟು, ವ್ಯವಹರಣೆಗಳನ್ನು ಮುಂದುವರೆಸಿತು.ಈ ಮಟ್ಟಿಗೆ, ಅಮಲ್ಜಾರಿ ನ್ಯಾಯಾಲಯವು ಅನುಸರಿಸಿದ ಕಾರ್ಯವಿಧಾನದಲ್ಲಿ ಯಾವುದೇ ದೋಷ ಅಥವಾ ನ್ಯೂನತೆಗಳಿರುವುದಿಲ್ಲ.ಅಮಲ್ಜಾರಿ ಪ್ರಕರಣದ ವ್ಯವಹರಣೆಗಳ ಬಗ್ಗೆ ಅವರಿಗೆ ತಿಳಿದಿರಲಿಲ್ಲವೆಂಬ ಅರ್ಜಿದಾರರ ಹೇಳಿಕೆಯನ್ನು ನಂಬಬೇಕಾದಲ್ಲಿ, ಅವರುಗಳು ವಾಸ್ತವವಾಗಿ ಅಮಲ್ಜಾರಿ ವ್ಯವಹರಣೆ ಕುರಿತು ಯಾವ ದಿನಾಂಕದಂದು ಮತ್ತು ಹೇಗೆ ತಿಳಿಯಿತು ಎಂಬುದನ್ನು ಬಹಿರಂಗಪಡಿಸಬೇಕಾಗಿರುತ್ತದೆ.ಅವರುಗಳು ತೀರಾ ಸರಳವಾಗಿ, ತಮಗೆ ಅದರ ಅರಿವಿರಲಿಲ್ಲ ಎಂದು ಹೇಳಿದ ಮಾತ್ರಕ್ಕೆ ಅವರ ನಿಲುವನ್ನು ನಂಬುವುದು ಕಷ್ಟವಾಗುತ್ತದೆ.ಅಮಲ್ಜಾರಿ ವ್ಯವಹರಣೆಗಳ ಬಗ್ಗೆ ಅವರಿಗೆ ತಿಳಿದುಬಂದ ದಿನಾಂಕ ಮತ್ತು ಸಂದರ್ಭವನ್ನು ಬಹಿರಂಗಪಡಿಸದ ಅವರ ಮೊಂಡುತನದ ಮೌನವು ಈ ನ್ಯಾಯಾಲಯದಲ್ಲಿ ನಡೆಯುತ್ತಿರುವ ಅಮಲ್ಜಾರಿ

ಪ್ರಕರಣದ ಬಗ್ಗೆ ಅವರುಗಳಿಗೆ ಅರಿವಿತ್ತು ಹಾಗೂ ಇಡೀ ವ್ಯವಹರಣೆಗಳನ್ನು ೧ ಅವರು ಸಂಪೂರ್ಣವಾಗಿ ಗಮನಿಸಿರಲೂಬಹುದು ಎಂಬುದನ್ನು ಸೂಚಿಸುತ್ತದೆ.ಅರ್ಜಿದಾರಸಂಖ್ಯೆ: 1 ಒಬ್ಬ ರೈತನಾಗಿರುವುದರ ಜೊತೆಗೆ ವಕೀಲನೂ ಆಗಿರುವುದು ನಮ್ಮ ಊಹೆಗೆ ಕಾರಣವಾಗಿರುತ್ತದೆ.ಎರಡನೇ ಅಪೀಲನ್ನು ವಜಾಗೊಳಿಸಿದ ಕೂಡಲೇ ಡಿಕ್ರಿಯು ಕಾರ್ಯರೂಪಕ್ಕೆ ಬರುವುದೆಂದು ಅವನಿಗೆ ತಿಳಿದಿರಲಿಲ್ಲವೆಂದೇನಲ್ಲ.ಆದ್ದರಿಂದ, ಈ ಕಾರಣವನ್ನು ನಂಬಲು ಸಾಧ್ಯವಿಲ್ಲ.

8. ಅರ್ಜಿದಾರರುಗಳ ಪರ ಮಾನ್ಯ ವಕೀಲರು, ಸಿವಿಲ್ ಪ್ರಕ್ರಿಯಾ ಸಂಹಿತೆಯ 34 ನೇ ನಿಯಮದ XXI ನೇ ಕ್ರಮಾದೇಶವನ್ನು, ವಿಳಂಬವನ್ನು ಮನ್ನಿಸಲು ಕೋರುವುದಕ್ಕೆ ಸಂಬಂಧಿಸಿದ ಕಾರಣಗಳಲ್ಲೊಂದಾಗಿ ನೀಡಿದ್ದಾರೆ.ಅಲ್ಲದೆ, ಅವರು ಸಿವಿಲ್ ಪ್ರಕ್ರಿಯಾ ಸಂಹಿತೆಯ 34 ನೇ ನಿಯಮದ XXI ನೇ ಕ್ರಮಾದೇಶವು, ಡಿಕ್ರಿಯ ಅನುಸರಿಸಿ ದಾಸ್ತಾವೇಜುಗಳ ಅಮಲ್ಜಾರಿಗೆ ಸಂಬಂಧಿಸಿದ ಕಾರ್ಯ ವಿಧಾನವನ್ನು ಉಪಬಂಧಿಸುತ್ತದೆಂದೂ, ಡಿಕ್ರಿಧಾರಕನು ನೋಂದಾಯಿಸಬೇಕಾದ ದಾಸ್ತಾವೇಜಿನ ಕರಡನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ತರುವಾಯ, ನಿಗದಿ ಪಡಿಸಿದ ಅವಧಿಯೊಳಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ನ್ಯಾಯಾಲಯವು ಅಗತ್ಯಪಡಿಸಿದ ನೋಟೀಸಿನೊಂದಿಗೆ ಕಳುಹಿಸಬೇಕಾದ ಕರಡನ್ನು ಸಿದ್ಧಪಡಿಸತಕ್ಕದ್ದೆಂದು ಅವನಿಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿರುವ ಪ್ರತಿಭಾ ಸಿಂಗ್ ' ಚ (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ನೀಡಿರುವ ತೀರ್ಪನ್ನು ಉದಾಹರಿಸಿರುತ್ತಾರೆ.ವಾಸ್ತವವಾಗಿ ಈ ಕಾರ್ಯವಿಧಾನವು ಸಿವಿಲ್ ಪ್ರಕ್ರಿಯಾ ಸಂಹಿತೆ 34 ನೇ ನಿಯಮದ XXI ನೇ ಕ್ರಮಾದೇಶದಲ್ಲಿ ಕಂಡುಬರುತ್ತದೆ ಮತ್ತು ಮಾನ್ಯ ಸರ್ವೋಚ್ಚ ಚ ನ್ಯಾಯಾಲಯವು ನೀಡಿರುವ ತೀರ್ಪಿಗೆ ಸಂಬಂಧಿಸಿದಂತೆ ಎರಡನೇ ಅಭಿಪ್ರಾಯವೇ ಇರುವುದಿಲ್ಲ.ಆದರೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 34 ನೇ ನಿಯಮದ XXI ನೇ ಕ್ರಮಾದೇಶವನ್ನು ಡಿಕ್ರಿಧಾರಕನು ಕರಡನ್ನು ಅಮಲ್ಜಾರಿ ಅರ್ಜಿಯೊಂದಿಗೆ ಸಲ್ಲಿಸಿದಾಗ ಮಾತ್ರ ಅನ್ವಯ ಮಾಡಬಹುದೆಂದು ಇಲ್ಲಿ ಉಲ್ಲೇಖಿಸಬಹುದಾಗಿರುತ್ತದೆ.ಅಂತಹ ಸಂದರ್ಭದಲ್ಲಿ ಕರಡಿನೊಂದಿಗೆ ಈ ತೀರ್ಪು ಋಣಿಗೆ ನೋಟೀಸನ್ನು ನೀಡುವುದು ಆಜ್ಞಾಪಕವಾಗಿರುತ್ತದೆ.ಪ್ರಾಯೋಗಿಕವಾಗಿ ಅಮಲ್ದಾರಿ ಅರ್ಜಿಯನ್ನು ಸಲ್ಲಿಸುವಾಗ ಸಾಮಾನ್ಯವಾಗಿ ಕರಡನ್ನು ಸಲ್ಲಿಸುವಂತಿಲ್ಲವೆಂಬುದು ಈವರೆಗೂ ಅನುಸರಿಸುತ್ತಿದ್ದ ಕಾರ್ಯ ವಿಧಾನವಾಗಿರುತ್ತದೆ.ಸಾಮಾನ್ಯವಾಗಿ, ನಿರ್ದಿಷ್ಟ ಪಾಲನೆಗೆ ಸಂಬಂಧಿಸಿದ ಡಿಕ್ರಿಯನ್ನು ಅನುಷ್ಠಾನಗೊಳಿಸುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆಯ 22 ನೇ ನಿಯಮದ XXI ನೇ ಕ್ರಮಾದೇಶದಡಿಯಲ್ಲಿ ಉದ್ದೇಶಿಸಲಾದಂತೆ ಕಾರಣವನ್ನು ತೋರಿಸುವ ನೋಟೀಸನ್ನು ತೀರ್ಪು ಋಣಿಗೆ ನೀಡಲಾಗುವುದು.ಅಮಲ್ದಾರಿ ಅರ್ಜಿಯನ್ನು ಡಿಗ್ರಿಯ ದಿನಾಂಕದಿಂದ ಎರಡು ವರ್ಷಗಳೊಳಗೆ ಸಲ್ಲಿಸಿದ್ದಾಗ್ಯೂ ಸಹ ಕಾರಣವನ್ನು ತೋರಿಸುವ ನೋಟೀಸನ್ನು ಹೊರಡಿಸುವುದಕ್ಕೆ ಯಾವುದೇ ನಿಷೇಧವಿರುವುದಿಲ್ಲ.ತೀರ್ಪು ಋಣಿಯು ನೋಟೀಸನ್ನು ಪಡೆದುಕೊಂಡಾಗ, ಕೆಲವೊಮ್ಮೆ ಡಿಕ್ರಿಯನ್ನು ಪಾಲಿಸಲು ಬಹುದಾಗಿದ್ದು ಅಂತಹ ಸಂದರ್ಭದಲ್ಲಿ ದಾಸ್ತಾವೇಜಿನ ಕರಡನ್ನು ಹಾಜರುಪಡಿಸುವ ಸಂಭವಗಳು ಉದ್ಭವಿಸದಿರಬಹುದು.

9. ತೀರ್ಪ ಋಣಿಯು ಕಾರಣ ತೋರಿಸುವ ನೋಟಿಸಿಗೆ ಪ್ರತಿಕ್ರಿಯಿಸಬಹುದು ಅಥವಾ ಪ್ರತಿಕ್ರಿಯಿಸದೆಯೂ ಇರಬಹುದು.ಒಂದು ವೇಳೆ ತೀರ್ಪು ಋಣಿಯು ನೋಟಿಸಿಗೆ ಪ್ರತಿಕ್ರಿಯಿಸಿ ನ್ಯಾಯಾಲಯದ ಎದುರು ಹಾಜರಾಗಿ ಡಿಕ್ರಿಯನ್ನು ಪಾಲಿಸದೆ ಇದ್ದಲ್ಲಿ, ಆತನ ಆಕ್ಷೇಪಣೆಯನ್ನು ಆಹ್ವಾನಿಸಿ, ದಾಸ್ತಾವೇಜುಗಳ ಕರಡನ್ನು ಆತನಿಗೆ ನೀಡಲಾಗುವುದು.ಆತ ಹಾಜರಾಗದಿದ್ದಲ್ಲಿ, ಆತನಿಗೆ ಮತ್ತೊಮ್ಮೆ ನೋಟೀಸನ್ನು ಜಾರಿ ಮಾಡುವ ಅವಶ್ಯಕತೆ ಇರುವುದಿಲ್ಲ.ಮತ್ತೊಮ್ಮೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 34 ನೇ ನಿಯಮದ XXI ನೇ ಆದೇಶವನ್ನು ಅನುಸರಿಸಬೇಕಾದ ಅವಶ್ಯಕತೆಯಿರುವುದಿಲ್ಲ.ನೋಟೀಸನ್ನು ತೀರ್ಪು ಋಣಿಗೆ ಕೇವಲ ಒಂದು ಬಾರಿ ಮಾತ್ರ ಹೊರಡಿಸಬಹುದಾಗಿದ್ದು, ಅರ್ಜಿದಾರ ಪರ ಮಾನ್ಯ ನ್ಯಾಯವಾದಿಗಳು, ಪ್ರತೀ ಹಂತಲ್ಲೂ ತೀರ್ಪುಋಣಿಗೆ ನೋಟೀಸನ್ನು ಪುನರಾವರ್ತಿತವಾಗಿ ಹೊರಡಿಸಬೇಕೆಂದು ವಾದಿಸಿರುವುದು ಅನಪೇಕ್ಷಿತವಾದುದಾಗಿರುತ್ತದೆ.ಸಿವಿಲ್ ಪ್ರಕ್ರಿಯಾ ಸಂಹಿತೆಯ 34 ನೇ ನಿಯಮದ XXI ನೇ ಕ್ರಮಾದೇಶದೊಂದಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 22 ನೇ ನಿಯಮದ XXI ನೇ ಕ್ರಮಾದೇಶವನ್ನು ಒಟ್ಟಿಗೆ ಓದುವುದು ಉತ್ತಮವಾದುದಾಗಿರುತ್ತದೆ.ಆದ್ದರಿಂದ, ನ್ಯಾಯವಾದಿಗಳ ಈ ವಾದವು ವಿಫಲವಾದುದಾಗಿರುತ್ತದೆ.

10. ಪ್ರತ್ಯರ್ಜಿದಾರನ ಪರ ನ್ಯಾಯವಾದಿಗಳು (ಯುಕ್ತವಾಗಿ) ವಾದಿಸಿರುವುದರಿಂದ, ರಿಟ್ ಅರ್ಜಿಸಂಖ್ಯೆ: 77106/2013 ರನ್ನುದಿನಾಂಕ: 04.08.2010 ರ ಆದೇಶವನ್ನು ಪ್ರಶ್ನಿಸಿ ದಾಖಲಿಸಲಾಗಿರುತ್ತದೆ.ಈ ರಿಟ್ ಅರ್ಜಿಯುದಿನಾಂಕ: 20.08.2010 ರ ಆದೇಶದೊಂದಿಗೆ ಯಾವ ಆಯಾಮದಲ್ಲೂ

ಹೊಂದಿಕೊಳ್ಳುವುದಿಲ್ಲ.ಹಾಗಾಗಿ, ಇದು ವಿಳಂಬವನ್ನು ಮನ್ನಿಸುವುದಕ್ಕೆ ಸಂಬಂಧಿಸಿದಂತೆ ಕಾಲ ಪರಿಮಿತಿ ಅಧಿನಿಯಮದ 5 ನೇ ಪ್ರಕರಣದಡಿಯಲ್ಲಿನ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅನ್ವಯಿಸಲು ಒಂದು ಉತ್ತಮ ಆಧಾರವಾಗಿರುವುದಿಲ್ಲ.ರಿಟ್ ಅರ್ಜಿಸಂಖ್ಯೆ: 77106/2013 ನ್ನುದಿನಾಂಕ: 28.08.2013 ರಂದು ಈ ನ್ಯಾಯಾಲಯವು ವಜಾ ಮಾಡಿರುತ್ತದೆಂದು ಹೇಳಬಹುದಾಗಿದ್ದರೂ ಸಹ, ಈ ಪುನರೀಕ್ಷಣಾ ಅರ್ಜಿಯನ್ನುದಿನಾಂಕ: 13.12.2013 ರಂದು ದಾಖಲಿಸಲಾಗಿರುತ್ತದೆ.ಅರ್ಜಿದಾರರುಗಳು ರಿಟ್ ಅರ್ಜಿಯಲ್ಲಿನ ಆದೇಶವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎದುರು ಪ್ರಶ್ನಿಸಬೇಕೆಂದು ಚ ಹೇಳಬಯಸಿರಬಹುದಾಗಿದ್ದಾಗ್ಯೂ, ಅವರ ಪರ ನ್ಯಾಯವಾದಿಗಳುದಿನಾಂಕ: 20.08.2010 ರ ಆದೇಶವನ್ನು ಪ್ರಶ್ನಿಸುವಂತೆ ಅವರಿಗೆ ಸಲಹೆಯನ್ನಿನತ್ತಿರಲೂಬಹುದು.ಅರ್ಜಿದಾರರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎದುರು ರಿಟ್ ಅರ್ಜಿಯಲ್ಲಿ ಆದೇಶವನ್ನು ಪ್ರಶ್ನಿಸಬೇಕೆಂದಿದ್ದರು ಎಂಬ ಹೇಳಿಕೆಯನ್ನು ನಂಬಬಹುದಾಗಿದ್ದಾಗ್ಯೂ, ನವದೆಹಲಿಯಲ್ಲಿ ಅವರ ಪರ ನ್ಯಾಯವಾದಿಗಳಿಂದ ಕಾನೂನು ಸಲಹೆಯನ್ನು ಪಡೆಯಲು ಅವರುಗಳಿಗೆ ಇಷ್ಟೊಂದು ದೀರ್ಘಕಾಲ ಬೇಕಾಯಿತು ಎಂಬುದನ್ನು ನಂಬಲು ಸಾಧ್ಯವಿಲ್ಲ.ಆದ್ದರಿಂದ,ದಿನಾಂಕ: 28.06.2013 ರಿಂದ 13.12.2013 ರ ತನಕ ಆದ ವಿಳಂಬಕ್ಕೆ ಯಾವುದೇ ವಿವರಣೆಗಳಿರುವುದಿಲ್ಲ.

11. ನ್ಯಾಯವಾದಿಗಳು ವಾದಿಸಿರುವ ಮತ್ತೊಂದು ಅಂಶವುದಿನಾಂಕ: 20.08.2010 ರ ಆದೇಶವು ಆರಂಭದಿಂದಲೇ ಶೂನ್ಯವಾಗಿದ್ದು, ಅಂತಹ ಆದೇಶವನ್ನು ಪ್ರಶ್ನಿಸಿದಾಗ, ವಿಳಂಬದ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂಬುದಾಗಿದೆ.ಆತನು ಶಿವಶಂಕರ್ ಗುರುಗಾರ್ -ವಿರುದ್ಧ ದಿಲೀಪ್ (ಮೇಲಿನ), ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಉಲ್ಲೇಖಿಸಿರುತ್ತಾನೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಅಮಲ್ದಾರಿ ನ್ಯಾಯಾಲಯಕ್ಕೆ ಡಿಕ್ರಿಯನ್ನು ಮಾರ್ಪಡಿಸುವ ಯಾವುದೇ ಅಧಿಕಾರ ವ್ಯಾಪ್ತಿಯಿರುವುದಿಲ್ಲ ಎನ್ನುವ ಅರ್ಥದಲ್ಲಿ,ದಿನಾಂಕ: 23.11.2005 ರ ಅಮಲ್ದಾರಿ ನ್ಯಾಯಾಲಯದ ಆದೇಶಕ್ಕೆ ಅಧಿಕಾರ ವ್ಯಾಪ್ತಿಯಿರುವುದಿಲ್ಲ.ಹಾಗಾಗಿ ಆದೇಶವನ್ನು ಅಕೃತತೆಗೊಳಿಸಲಾಗಿದೆ ಎಂದು ಅಭಿಪ್ರಾಯಪಟ್ಟಿರುತ್ತದೆ. ಈ ಸಂದರ್ಭ ಇದಾಗಿರುವುದಿಲ್ಲ.ಹಾಗಾಗಿ, ಸದರಿ ತೀರ್ಪು ಅನ್ವಯವಾಗುವುದಿಲ್ಲ.ದಿನಾಂಕ: 20.08.2010 ರ ಆದೇಶವು ಕಾನೂನುಬಾಹಿರವಾಗಿಲ್ಲ.ಆ ದಿನದಂದು, ಅಮಲ್ದಾರಿ ನ್ಯಾಯಾಲಯವು ಗುತ್ತಿಗೆ ಪತ್ರವನ್ನು ಬರೆದುಕೊಡಲಾಗಿದ್ದು ನೊಂದಾಯಿಸಲಾಗಿದೆಯೆಂದೂ ಮುಂದುವರೆದು ತೀರ್ಪು ನೀಡಿ ಬರೆದುಕೊಡಲು ಏನೂ ಇಲ್ಲವೆಂದು ತೀರ್ಪು ನೀಡಿ ಅಮಲ್ದಾರಿ ಅರ್ಜಿಯನ್ನು ಕೊನೆಗೊಳಿಸಿರುತ್ತದೆ.ಸಂಪೂರ್ಣವಾಗಿ ಮನವರಿಕೆಯಾಗಿರುವುದನ್ನು ನಮೂದಿಸಿ ಅಮಲ್ದಾರಿ ವ್ಯವಹರಣೆಗಳನ್ನು ಕೊನೆಗೊಳಿಸುವುದು ಕಾನೂನು ಬಾಹಿರ ಆದೇಶವಾಗಿರುವುದಿಲ್ಲ.

12. ಅರ್ಜಿದಾರರು ವಿಳಂಬವನ್ನು ಮನ್ನಿಸಲು ಕೋರಿ ಕೆಲವೊಂದು ಕಾರಣಗಳನ್ನು ನೀಡಿದ್ದು, ಅವರುಗಳು ನೀಡಿರುವ ಕಾರಣಗಳು, ಪರ್ಯಾಪ್ತ ಕಾರಣಗಳ ವ್ಯಾಪ್ತಿಯೊಳಗೆ ಬರುವುದಿಲ್ಲ ಎಂಬುದನ್ನು ಪ್ರಾರಂಭದಲ್ಲೇ ಹೇಳಬೇಕಾಗಿತ್ತು.ಪ್ರತ್ಯರ್ಜಿದಾರ/ಡಿಕ್ರಿದಾರಕನನ್ನು ತೊಂದರೆಗೊಳಪಡಿಸಲು ವಿಷಯವನ್ನು ಮತ್ತೊಮ್ಮೆ ಪುನಃ ಆರಂಭಿಸಿರುವುದು ಅರ್ಜಿದಾರರುಗಳ ದುರಾಗ್ರಹಪೂರ್ವದ ವರ್ತನೆಯನ್ನು ತೋರಿಸುತ್ತಿದೆ.ಅವರುಗಳ ಕಡೆಯಿಂದಾದ ನಿರ್ಲಕ್ಷ್ಯತೆ ಇಲ್ಲಿ ಬಹಳವಾಗಿ ಎದ್ದು ಕಾಣುತ್ತಿದೆ.ಈ ಸಂದರ್ಭದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪುಂಡಲೀಕ ಜಲಮ್ ಪಾಟೀಲ್ (ದಿವಂಗತ) ಕಾನೂನುಬದ್ಧ ವಾರಸುದಾರರು ವಿರುದ್ಧ ಕಾರ್ಯ ನಿರ್ವಾಹಕ ಇಂಜಿನಿಯರ್, ಜಲ್ಗಾಂವ್ ಮೀಡಿಯಂ ಪ್ರಾಜೆಕ್ಟ್ ಮತ್ತು ಇನ್ನೊಬ್ಬರು - (2008) 17 ಸರ್ವೋಚ್ಚ ನ್ಯಾಯಾಲಯದ ಮೊಕದ್ದಮೆಗಳು 448, ಪ್ರಕರಣದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

" ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ವಿಳಂಬವನ್ನು ಮನ್ನಿಸಲು ಕೋರಿ ಸಲ್ಲಿಸಿರುವ ಅರ್ಜಿಯಲ್ಲಿ ನಮೂದಿಸಿರುವ ಹೇಳಿಕೆಯೇ ಸ್ವತಃ ಅರ್ಜಿಯಲ್ಲಿ ನಮೂದಿಸಿರುವ ದೃಢಕ್ತಿಗಳು ವಿಳಂಬವನ್ನು ಮನ್ನಿಸಲು ಪರ್ಯಾಪ್ತ ಕಾರಣಗಳನ್ನು ಪ್ರಕಟಿಸುತ್ತವೆಯೇ ಎಂದು ವಿಚಾರಣೆಗೆ ಒಳಪಡಿಸಿದೆಯೇ ಅರ್ಜಿಯನ್ನು ವಜಾ ಮಾಡುವುದಕ್ಕೆ ಸಾಕಷ್ಟಾಗುತ್ತದೆ:

ಕಾಲ ಪರಿಮಿತಿಯ ಪ್ರತಿಷೇದದಿಂದ ತಪ್ಪಿಸಿಕೊಳ್ಳಲು ತಪ್ಪು ನಿಲುವುಗಳನ್ನು ತಳೆಯುವ ಪಕ್ಷಕಾರನನ್ನು, ವಿಳಂಬವನ್ನು ಮನ್ನಿಸುವ ಮೂಲಕ ಸುಳ್ಳುತನದಿಂದ ಯಾವುದೇ ಲಾಭವನ್ನು ಪಡೆಯಲು ಪ್ರೋತ್ಸಾಹಿಸಲಾಗದು.

13. ಈ ನ್ಯಾಯಾಲಯವು, ಸದರಿ ಪ್ರತ್ಯರ್ಜಿದಾರನ -ವಿರುದ್ಧ-ಮೋಹನ್ ಹಾಗೂ ಇತರರು ದಾಖಲಿಸಿದ ಸಿವಿಲ್ ಪುನರೀಕ್ಷಣಾ ಅರ್ಜಿಸಂಖ್ಯೆ: 100025/2014 ರಲ್ಲಿ ಸಿವಿಲ್ ಪುನರಿಕ್ಷಣಾ ಅರ್ಜಿಯನ್ನು ಸಲ್ಲಿಸುವಲ್ಲಿ ಆದ 788 ದಿನಗಳ ಮಿತಿಮೀರಿದ ವಿಳಂಬದ ಕಾರಣಗಳನ್ನು ಪುರಸ್ಕರಿಸಿರುವುದಿಲ್ಲ.ಸಿವಿಲ್ ಪುನರಿಕ್ಷಣಾ ಅರ್ಜಿಸಂಖ್ಯೆ: 100025/2014 ರಲ್ಲಿಯೂ ಸಹ ರಿಟ್ ಅರ್ಜಿಸಂಖ್ಯೆ: 77106/2013 ಹಾಗೂ 71977 71982/2012 ರಿಟ್ ಅರ್ಜಿಗಳನ್ನು ಸಹ ವಿಳಂಬಕ್ಕೆ ಸಂಬಂಧಿಸಿದಂತೆ ಪರಿಗಣಿಸಲು ಉಲ್ಲೇಖಿಸಲಾಗಿರುತ್ತದೆ.ಈ ಕಾರಣಗಳನ್ನು ಪುರಸ್ಕರಿಸಲಾಗಿಲ್ಲ.ಸದರಿ ಪುನರೀಕ್ಷಣಾ ಅರ್ಜಿಯಲ್ಲಿ ಈ ನ್ಯಾಯಾಲಯವು ಅದರಲ್ಲಿನ ಅರ್ಜಿದಾರರುಗಳ ನಿರ್ಲಕ್ಷ್ಯ ವಹಿಸಿದ್ದಾರೆ ಎಂಬುದನ್ನು ಈ ನ್ಯಾಯಾಲಯವು ಗಮನಿಸಿದೆ.ಅದೇ ಅಳತೆ ಗೋಲು ಈ ಮೊಕದ್ದಮೆಯ ವಾಸ್ತವಾಂಶಗಳಿಗೂ ಅನ್ವಯವಾಗುತ್ತದೆ.ಇಲ್ಲಿನ ಅರ್ಜಿದಾರರು ಬೇಜವಾಬ್ದಾರಿಯುತವಾಗಿರುವುದಿಲ್ಲದೇ ವಿಷಯವನ್ನು ಪುನಃ ಆರಂಭಿಸುವ ಉದ್ದೇಶಕ್ಕಾಗಿಯೇ ಪ್ರಸ್ತುತ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸಿರುತ್ತಾರೆ.ಇಂತಹ ವರ್ತನೆಯನ್ನು ಉತ್ತೇಜಿಸಲಾಗುವುದಿಲ್ಲ.ಆದ್ದರಿಂದ, ಈ ಅರ್ಜಿಯನ್ನು ಪುರಸ್ಕರಿಸಿ ವಿಳಂಬವನ್ನು ಮನ್ನಿಸುವುದಕ್ಕೆ ಸಂಬಂಧಿಸಿದಂತೆ ನಮಗೆ ಉತ್ತಮ ಕಾರಣಗಳು ಕಂಡುಬಂದಿರುವುದಿಲ್ಲ.ತದನುಸಾರವಾಗಿ, ಕಾಲ ಪರಿಮಿತಿ ಅಧಿನಿಯಮದ 5 ನೇ ಪ್ರಕರಣದಡಿಯನ್ನು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಲಾಗಿರುತ್ತದೆ.ತತ್ಪರಿಣಾಮವಾಗಿ, ಮನರೀಕ್ಷಣಾ ಅರ್ಜಿಯನ್ನು ವಜಾಗೊಳಿಸಲಾಗಿದೆ.